ಚಾರಣ



# ಚಿಂತಾಮಣಿ ಕೈಲಾಸಗಿರಿ

ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಕೈಲಾಸಗಿರಿ ಹಾಗೂ ಗುಹಾಂತರ ದೇವಾಲಯ, ಚಿಂತಾಮಣಿಯ ಪ್ರವಾಸಿತಾಣವಾಗಿ ಆಕರ್ಷಿಸುತ್ತಿವೆ.

■ ನಿರಂಜನ ವಾನಳ್ಳಿ

ಕೋಲಾರ ಜಿಲ್ಲೆಯ ಗಡಿಭಾಗದ ತಾಲ್ಲೂಕು ಚಿಂತಾಮಣಿ, ಮಸಾಲೆ ಕಡ್ಲೆಬೀಜಕ್ಕೆ ಹೆಸರುವಾಸಿ. ಕೈವಾರ ತಾತಯ್ಯನಿಂದಾಗಿ ಪ್ರಸಿದ್ಧ. ಇದೀಗ ಚಿಂತಾಮಣಿಗೆ ಪ್ರವಾಸೀ ಮುಖವೊಂದು ಹೊಸದಾಗಿ ಸೇರಿಕೊಳ್ಳುತ್ತಿದೆ. ಅದು ಕೈಲಾಸಗಿರಿ ಬೆಟ್ಟ ಹಾಗೂ ಗುಹಾಂತರ ದೇವಾಲಯ.

ಈ ಭಾಗದಲ್ಲಿ ಕಲ್ಲುಬಂಡೆಗಳ ಬೆಟ್ಟಗಳಿಗೇನೂ ಕೊರತೆಯಿಲ್ಲ. ಕಣ್ಣು ಹಾಯಿಸಿದಷ್ಟೂ ದೂರ ಕಾಣುವುದು ಬೋಳುಗುಡ್ಡಗಳೇ. ಬಹುತೇಕ ಅವು ಬೃಹತ್ ಶಿಲೆಗಳಿಂದ ಕೂಡಿವೆ. ಸುಮಾರು 30 ವರ್ಷಗಳ ಹಿಂದೆ ಚಿಂತಾಮಣಿಯ ಹಿರಿಯ ನಾಯಕ ಎಂ.ಎ. ಚೌಡಾರೆಡ್ಡಿಯವರು ಈ ಬೆಟ್ಟಗಳ ತಪ್ಪಲಿನಲ್ಲಿ ಚಿಂತಾಮಣಿಗೆ ನೀರು ಒದಗಿಸಲು ಕೆರೆ ಕಟ್ಟಿಸಿದರು. ಕೆರೆಯ ನಿರ್ಮಾಣ ಮುಗಿದಾಗ ಅಲ್ಲಿ ಓಡಾಡುತ್ತಿದ್ದ ಅವರಿಗೆ ಹತ್ತಿರದ ಶಿಲಾ ಬೆಟ್ಟ ಕೈಲಾಸ ಪರ್ವತದಂತೆ ಕಂಡಿತಂತೆ. ಈ ಬಂಡೆಯನ್ನೇ ಕೊರೆದು ಗುಹಾಂತರ ದೇವಾಲಯ ನಿರ್ಮಿಸುವ ಕನಸು ಅವರಿಗೆ ಬಿತ್ತು. ಆಗಿಂದ ರಾಜಕೀಯ, ಸಾಮಾಜಿಕ ಜೀವನದಿಂದ ದೂರ ಉಳಿದ ಅವರು ಗುಹಾಂತರ ದೇವಾಲಯ ನಿರ್ಮಾಣವೇ ತಮ್ಮ ಜೀವನದ ಗುರಿಯೆಂಬಂತೆ ಅದರ ನಿರ್ಮಾಣಕ್ಕೆ ಕೆಲಸ ಮಾಡಿದರು.

ಇದರ ಪರಿಣಾಮವೇ ಚಿಂತಾಮಣಿಯ ಸಮೀಪ ಏಕಶಿಲಾ ಪರ್ವತವೊಂದು ಕೈಲಾಸಗಿರಿಯ ರೂಪ ತಳೆದಿದೆ. ವಯಸ್ಸಾದವರು, ಅಂಗವಿಕಲರೂ ಹತ್ತಿ ಬರುವ ಹಾಗೆ ಈಗ ಸುಲಲಿತ ರಸ್ತೆಯ ನಿರ್ಮಾಣವೂ ನಡೆದಿದೆ. ಈಗ ಸುಮಾರು ನೂರು ಮೀಟರು ಹತ್ತಬೇಕಿದೆ. ರಸ್ತೆಯಾದರೆ ಆ ತಾಪತ್ರಯವೂ ಕಳೆಯಲಿದೆ. ಬಂಡೆಯ ಬುಡಕ್ಕೆ ಬಂದರೆ ಬಂಡೆಯನ್ನು ಕೊರೆದು ಗುಹೆ ನಿರ್ಮಿಸಿರುವುದು ಕಾಣುತ್ತದೆ. ಹೊರಗೆ ಎಷ್ಟೇ ಸೆಕೆ ಇದ್ದರೂ ಗುಹೆಯ ಒಳಗೆ ತಂಗಾಳಿ. ಸುಮಾರು ಇನ್ನೂರು ಜನ ಕೂರುವಷ್ಟು ದೊಡ್ಡ ಗುಹೆಯನ್ನೂ ಸೊಗಸಾದ ವೇದಿಕೆಯನ್ನೂ ನಿರ್ಮಿಸಲಾಗಿದೆ. ಜನ ವೇದಿಕೆಯ ಮೇಲೇರಿ ಕೂರುತ್ತಾರೆ.

ಅಲ್ಲಿಂದ ಮುಂದಕ್ಕೆ ಹೋದರೆ ದೇವರುಗಳ ಸಾಲು. ಗಣಪತಿ, ಶಿವ, ದೇವಿ ಎಲ್ಲರೂ ಅಲ್ಲಿದ್ದಾರೆ. ಕುಳಿತು ಧ್ಯಾನ ಮಾಡುವುದಿದ್ದರೆ ಇದು ಪ್ರಶಸ್ತ ಜಾಗ. ಅಲ್ಲಿಂದ ಮುಂದಕ್ಕೆ ಬಂದರೆ ದೊಡ್ಡದಾದ ಶಿವಲಿಂಗವನ್ನು ಅದೇ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಜೊತೆ ಬಹುಬಳಕೆಯ ರಂಗಮಂದಿರ, ಧ್ಯಾನ ಶಾಲೆಗಳನ್ನೂ ಕಟ್ಟಲಾಗುತ್ತಿದೆ. ಈಗ ದಿನಕ್ಕೆ ಸರಾಸರಿ ನೂರಾರು ಜನ ಭೇಟಿ ನೀಡುತ್ತಿದ್ದಾರೆ. ಕನಿಷ್ಠ ನೂರಿನ್ನೂರು ಭಕ್ತರು ಗಂಗಾಧರೇಶ್ವರ ಅನ್ನದಾನ ಸೇವಾ ಟ್ರಸ್ಟ್ ವತಿಯಿಂದ ನಡೆಯುವ ಅನ್ನದಾಸೋಹದಲ್ಲಿ ಪ್ರಸಾದ ಸ್ವೀಕರಿಸುತ್ತಾರೆ. ಇವೆಲ್ಲ ಕೆಲಸಗಳು ಮುಗಿದಾಗ ಕೈಲಾಸಗಿರಿ ಚಿಂತಾಮಣಿಯ ಹೊಸ ಆಕರ್ಷಣೆಯಾಗುವುದರಲ್ಲಿ ಸಂದೇಹವಿಲ್ಲ. 70 ಕಿಲೋಮೀಟರ್ ದೂರದ ಬೆಂಗಳೂರಿಗೆ ಒಂದೂವರೆ ಗಂಟೆಯ ಪ್ರಯಾಣವಾದ್ದರಿಂದ ಕುಟುಂಬಸ್ಥರ ಜೊತೆ ಒಂದು ದಿನದ ಪ್ರವಾಸಕ್ಕೆ ಹೋಗಿ ಬರಲು ಹೇಳಿಮಾಡಿಸಿದ ಸ್ಥಳ.

ಪ್ರತಿಕ್ರಿಯಿಸಿ: feedback@sudha.co.in

ಚಿತ್ರಕೃಪೆ: ವಿಕಿಕಾಮನ್ಸ್

